ಮೂಲ ದಾವಾ ಸಂಖ್ಯೆ . 82/2015 ಪಿ ಡಬ್ಲ್ಯೂ 2

(ದಿನಾಂಕ 23-09-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣಿಕರಿಸಲಾಯಿತು.)

ಪಾಟೀ ಸವಾಲುಃ ಪ್ರತಿವಾದಿಯರ ಪರ ಶ್ರೀ ಎಸ್ ಬಿ ವಿ ವಕೀಲರಿಂದಃ-

ನನ್ನ ಸ್ವಂತ ಊರು ಕಡ್ಲಬಾಳು ಗ್ರಾಮ. ಕಡಲಬಾಳು ಗ್ರಾಮ ಪಿಂಜಾರ ಹೆಗ್ಡಾಳ್ ಗ್ರಾಮದಿಂದ ಸುಮಾರು 10 ಕಿ ಮಿ ಅಂತರದಲ್ಲಿದೆ ಎಂದರೆ ಸಾಕ್ಷಿಯು 4 ಕಿ ಮಿ ಅಂತರದಲ್ಲಿದೆ ಎನ್ನುತ್ತಾರೆ. ನಾನು ದಾವಾ ಜಮೀನನ್ನು ನೋಡಿರುತ್ತೇನೆ. ನಾನು ಸುಮಾರು 15-20 ವರ್ಷದಿಂದ ನೋಡುತ್ತಿದ್ದೆ. ಸದರಿ ಜಮೀನಿನಲ್ಲಿ ಕಳೆದ ವರ್ಷ ಏನು ಬೆಳೆ ಬೆಳೆದಿತ್ತು ಎಂದರೆ ಸಾಕ್ಷಿ ಸಜ್ಜೆ ಬೆಳೆ ಬರೆಳೆದಿರಬಹುದು ಎನ್ನುತ್ತಾರೆ. ಅದರ ಹಿಂದಿನ ವರ್ಷ ನವಣೆ ಬೆಳೆಯನ್ನು ಬೆಳೆದಿರಬಹುದು. ಈ ವರ್ಷ ದಾವಾ ಜಮೀನಿನಲ್ಲಿ ಏನು ಬೆಳೆ ಬೆಳೆದಿರುತ್ತಾರೆಂದು ನನಗೆ ಗೊತ್ತಿಲ್ಲ. ದಾವಾ ಜಮೀನಿನ ಅಕ್ಕಪಕ್ಕ ಯಾರ ಜಮೀನು ಇದೆ ಎನ್ನುವುದು ನನಗೆ ಗೊತ್ತು. ನನಗೆ ಪೂರ್ವ ಪಶ್ಚಿಮ ಉತ್ತರ ದಕ್ಷಿಣ ಎನ್ನುವ ದಿಕ್ಕುಗಳು ನನಗೆ ಗೊತ್ತಾಗುವುದಿಲ್ಲ. ಸೂರ್ಯ ಹುಟ್ಟುವ ದಿಕ್ಕಿಗೆ ಫಕೀರಮ್ಮ ಇವರ ಜಮೀನು ಇದೆ. ಸೂರ್ಯ ಮುಳುಗುವ ದಿಕ್ಕಿಗೆ ಆಂದ್ರದವರ ಜಮೀನು ಇದೆ, ಹೊಳೆಕಡೆಗೆ ಯಾರ ಜಮೀನು ಇದೆ ಎನ್ನುವುದು ನನಗೆ ಗೊತ್ತಿಲ್ಲ, ಹನುಮನ ದಿಕ್ಕಿಗೆ ಅಗಸರ ಹೊಲ ಇದೆ. ನಾನು ದಾವಾ ಜಮೀನನ್ನು ನೋಡಿರುವುದಿಲ್ಲ, ನಾನು ಹೇಳುತ್ತಿರುವುದು ಸುಳ್ಳು ಎಂದರೆ ಸರಿಯಲ್ಲ. ದಾವಾ ಜಮೀನನ್ನು ಯಾವತ್ತಿಗೂ ಪ್ರತಿವಾದಿ ಮತ್ತು ಅವರ ವಂಶಸ್ಥರು ಸಾಗು ಮಾಡುತ್ತಾರೆಂದರೆ ಸರಿಯಲ್ಲ ಸಾಕ್ಷಿ ಮುಂದುವರೆದು ವಾದಿ ಸ್ವಾಧೀನದಲ್ಲಿರುತ್ತಾರೆ. ಯಾವ ರೀತಿ ವಾದಿ ದಾವಾ ಜಮೀನಿನ ಸ್ವಾಧೀನದಲ್ಲಿರುತ್ತಾರೆನ್ನುವ ಮಾಹಿತಿ ನನಗೆ ಇಲ್ಲ. ನನಗೆ ವಾದಿಯು ಸಾಕ್ಷಿ ಹೇಳಲು ಕರೆದುಕೊಂಡು ಬಂದಿರುತ್ತಾನೆಂದರೆ ಸರಿ ಸಾಕ್ಷಿ ಮುಂದುವರೆದು ನನ್ನ ಜಮೀನು ಸಹಾ ಅಲ್ಲೇ ಇದೆ ಎನ್ನುತ್ತಾರೆ. ನನ್ನ ಜಮೀನಿನ ಸರ್ವೆ ನಂಬರ್ ನನಗೆ ಗೊತ್ತಿಲ್ಲ. ದಾವಾ ಜಮೀನಿನಿಂದ 3-4 ಜಮೀನು ಬಿಟ್ಟು ನನ್ನ ಜಮೀನು ಇರುತ್ತದೆ. ಅದು ಅಂದಾಜು ಅರ್ಧ ಕಿ ಮಿ

ಇರಬಹುದು. ನನ್ನ ಜಮೀನಿನ ಪಹಣಿ ನನ್ನ ಅಜ್ಜನ ಹೆಸರಿನಲ್ಲಿದೆ. ವಾದಿ ಜಮೀನಿನ ಸರ್ವೆ ನಂ.140 ಸಿ/1 ಇರುತ್ತದೆ. ಅದರ ಖರೀದಿ ಪತ್ರ ನೋಡಿದ್ದೇನೆ ಅದು ಸುಮಾರು 4 ಎಕರೆ ಇದೆ ಅದರ ಪಹಣಿ 3.25 ಎಕರೆ ಇದೆ. ನನಗೆ ಯಾವುದೇ ವಿಚಾರ ಗೊತ್ತಿಲ್ಲದಿದ್ದರೂ ಸಹಾ ವಾದಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಪ್ರಮಾಣಪತ್ರವನ್ನು ದಾಖಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ,

ಸಿವಿಲ್ ಜಡ್ಜ ಮತ್ತು ಜೆ ಎಂ ಎಫ್ ಸಿ.,
ಹಗರಿಬೊಮ್ಮನಹಳ್ಳಿ